ದಿನಾಂಕಃ 02-08--2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

<u>ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಿಂದ</u>

ನನ್ನ ತಾತನ ಹೆಸರು ನರೇಶ್ಚಂದ್ರ ಬಿಸ್ವಾಸ್. ಸದರಿ ನರೇಶ್ಚಂದ್ರರವರಿಗೆ ಬಿದನ್, ನರತಮ್, ಸುಚಿತ್ರಾ ಬಿಸ್ವಾಸ್ ಎನ್ನುವ ಮೂರು ಜನ ಗಂಡುಮಕ್ಕಳು, ಸಂಧ್ಯಾ ಎನ್ನುವ ಒಬ್ಬ ಹೆಣ್ಣುಮಗಳು ಇದ್ದಳು. ನನ್ನ ತಂದೆ ಈಗ ಜೀವಂತ ಇದ್ದಾರೆ. ನನ್ನ ತಂದೆ ತಾಯಿಗೆ ನಾವು ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣುಮಗಳು ಎಂದರೆ ಸರಿ. ನನ್ನ ಸಹೋದರನ ಹೆಸರು ಸುಮಿತ್ ಬಿಸ್ವಾಸ್ ಹಾಗೂ ಸಹೋದರಿಯ ಹೆಸರು ರಿತಾ ಬಿಸ್ವಾಸ್.

1 ಮತ್ತು 2 ನೇ ಪ್ರತಿವಾದಿಯರ ತಂದೆಯ ಹೆಸರು ಸಚಿನ್ ಬಿಸ್ವಾಸ್ ಎಂದರೆ ಸರಿ. 3 ನೇ ಪ್ರತಿವಾದಿಯ ಗಂಡನ ಹೆಸರು ಸುರೇಶ. ನನ್ನ ತಂದೆ ಬಿದನ್ ಬಿಸ್ವಾಸ್ ರವರು 2 ನೇ ಪ್ರತಿವಾದಿಗೆ ರೂ.12 ಸಾವಿರಗಳಿಗೆ ದಾವಾ ಆಸ್ತಿ ಪೈಕಿ ಪೂ-ಪಃ 25 ಫೀಟ್ ಹಾಗೂ ಉ-ದಃ 40 ಫೀಟ್ ಆಸ್ತಿಯನ್ನು ದಿಃ 27-07-2006 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಸದರಿ ಮಾರಾಟಕ್ಕೆ ತಿಮ್ಮಣ್ಣ, ಜಗದೀಶ ಬಾವಲಿ, ಸುಮಂತ ಮಂಡಲ, ನರದ ಬೈರಾಗಿ, ಪ್ರವೇಶ ಬೈರಾಗಿ ಹಾಗೂ ಅಮುಲ ಮಂಡಲ, ಶೇಖರಗೌಡ ಬಾದರ್ಲಿ ಹಾಗೂ ವಿಶ್ವನಾಥ ಎನ್ನುವವರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1995 ರಲ್ಲಿ ನನ್ನ ತಂದೆ 2 ನೇ ಪ್ರತಿವಾದಿಗೆ ಮೇಲೆ ಹೇಳಿದ ಕ್ಷೇತ್ರ ಆಸ್ತಿಯನ್ನು ಕಬ್ಜಾಕ್ಕೆ ಕೊಟ್ಟಿದ್ದರು ಎಂದರೆ ಸರಿ ಅಲ್ಲ. ಸದರಿ ದಿನದಿಂದ ಇಲ್ಲಿಯವರೆಗೆ ಸದರಿ ಕ್ಷೇತ್ರ 2 ನೇ ಪ್ರತಿವಾದಿಯ ಕಬ್ಜಾದಲ್ಲಿದೆ ಎಂದರೆ ಸರಿ ಅಲ್ಲ.

ಮೇಲೆ ಹೇಳಿದ ಕ್ಷೇತ್ರದಲ್ಲಿ 2 ನೇ ಪ್ರತಿವಾದಿ 12 X 25 ಕ್ಷೇತ್ರದಲ್ಲಿ ಕಿರಾಣಿ ಅಂಗಡಿ ಇಟ್ಟುಕೊಂಡಿರುತ್ತಾನೆ ಎಂದರೆ ಸರಿ ಅಲ್ಲ. ಸದರಿ ಕಿರಾಣಿ ಅಂಗಡಿಗೆ ಸಂಬಂಧಪಟ್ಟ ಪಂಚಾಯತಿಯವರು ಪರವಾನಿಗೆ ನೀಡಿರುತ್ತಾರೆ ಎಂದರೆ ಸರಿ ಅಲ್ಲ. ಸದರಿ ಅಂಗಡಿಯ ಪಶ್ಚಿಮಕ್ಕೆ ಪ್ರತಿವಾದಿಯರು ಜೋಪಡಿ ಹಾಕಿಕೊಂಡು ವಾಸವಿದ್ದಾರೆ ಎಂದರೆ ಸರಿ ಅಲ್ಲ. 3 ನೇ ಪ್ರತಿವಾದಿ ಸದರಿ ಮನೆಗೆ ಸಂಬಂಧಿಸಿ ತನ್ನ ಹೆಸರಿನಲ್ಲಿ ವಿದ್ಯುತ್ ಬಿಲ್ಲನ್ನು ಸಹ ಪಡೆದುಕೊಂಡು ಅದನ್ನು ಪಾವತಿಸಿರುತ್ತಾರೆ ಎಂದರೆ ಸರಿ ಅಲ್ಲ. ನನ್ನ ತಂದೆ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

ದಾವಾ ಆಸ್ತಿಯಲ್ಲಿ 2005-06 ರಲ್ಲಿ 2 ನೇ ಪ್ರತಿವಾದಿಗೆ ಸರ್ಕಾರದಿಂದ ಮನೆ ಮಂಜೂರಾಗಿತ್ತು ಎಂದರೆ ಸರಿ ಅಲ್ಲ. ನಂತರ ಪ್ರತಿವಾದಿಯರು ಸದರಿ ಜಾಗೆಯಲ್ಲಿ ದಕ್ಷಿಣಕ್ಕೆ ಪೂರ್ವ-ಪಶ್ಚಿಮ 13 ಫಿಟ್ ಉತ್ತರ-ದಕ್ಷಿಣ 25 ಫೀಟ್ ಕ್ಷೇತ್ರದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ ಅಲ್ಲ. ಸಾಕ್ಷಿಯು ಮುಂದುವರೆದು ಸದರಿ ಕ್ಷೇತ್ರದಲ್ಲಿ ಯಾವುದೇ ಮನೆ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಕ್ಷೇತ್ರದಲ್ಲಿ ಮನೆ ಕಟ್ಟಿಕೊಳ್ಳಲು ಸರ್ಕಾರ 2 ನೇ ಪ್ರತಿವಾದಿಗೆ ಮೊದಲನೇ ಕಂತು ಎಂದು ರೂ.25 ಸಾವಿರಗಳನ್ನು ಕೊಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ 25 X 40 ಕ್ಷೇತ್ರಕ್ಕೆ ನಾವಾಗಲೀ ಅಥವಾ ನನ್ನ ತಂದೆಯವರದಾಗಲೀ ಯಾವುದೇ ಹಕ್ಕು ಅಥವಾ ಅಧಿಕಾರ ಇರುವುದಿಲ್ಲ ಎಂದರೆ ಸರಿ ಅಲ್ಲ.

ಸಾಕ್ಷಿಗೆ ಮನೆ ಇರುವ ಬಗ್ಗೆ ಭಾವಚಿತ್ರ ತೋರಿಸಲಾಗಿ ಸಾಕ್ಷಿಯು ಅದನ್ನು ನಿರಾಕರಿಸಿರುತ್ತಾರೆ. ಸಾಕ್ಷಿಯು ಗ್ರಾಮ ಪಂಚಾಯತಿ ಬಾದರ್ಲಿಯವರು ನೀಡಿದ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. 2009 ರಲ್ಲಿ ಬಾದರ್ಲಿ ಗ್ರಾಮದ ವ್ಯಾಪ್ತಿಯಲ್ಲಿ ಪ್ರವಾಹ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯಕ್ಕೆ ಪಂಚಾಯತಿಯಲ್ಲಿಯೂ ಸಹ ನೀರು ನುಗ್ಗಿ ದಾಖಲೆಗಳು ಕೊಚ್ಚಿಕೊಂಡು ಹೋಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಸದರಿ ಆಸ್ತಿಯಲ್ಲಿ ಕಿರಾಣಿ ಅಂಗಡಿಯ ಸಾಮಾನುಗಳು ಹಾಗೂ ಸಪ್ಲೇಯರ್ ಸಾಮಾನುಗಳು ಇಟ್ಟುಕೊಂಡಿರುತ್ತಾರೆ ಎಂದರೆ ಸರಿ ಅಲ್ಲ. ಪ್ರತಿವಾದ ಪತ್ರದ ಖಂಡಿಕೆ13 ರಲ್ಲಿ ತೋರಿಸಿದ ಎಲ್ಲ ವಸ್ತುಗಳನ್ನು ಪ್ರತಿವಾದಿಯರು ಸದರಿ ಜಾಗೆಯಲ್ಲಿ ಇಟ್ಟುಕೊಂಡಿರುತ್ತಾರೆ ಎಂದರೆ ಸರಿ ಅಲ್ಲ.

ನ್ಯಾಯಾಲಯದಿಂದ ಕಮೀಷನರ್ ರವರನ್ನು ನೇಮಕ ಮಾಡಿ ಸ್ಥಳ ಪರೀಶೀಲನೆ ಮಾಡಿ ವರದಿ ನೀಡಲು ನನ್ನದು ಯಾವುದೇ ತಕರಾರು ಇರುವುದಿಲ್ಲ.

ದಾವಾ ಆಸ್ತಿಯಲ್ಲಿ ನಾವೇ ಕಬ್ಜಾದಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತೀದ್ದೇನೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯ 25 X 40 ಕ್ಷೇತ್ರದಲ್ಲಿ ಪ್ರತಿವಾದಿಯರಿಗೆ ಯಾವುದೇ ಹಕ್ಕು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಪ್ರತಿವಾದಿಯರು ಅತೀಕ್ರಮಣ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ದಿಃ 05-12-2021 ರ ದಿನಾಂಕವನ್ನು ನನ್ನ ವಾದಪತ್ರದಲ್ಲಿ ಬರೆಸಿದ್ದರ ಬಗ್ಗೆ ನನಗೆ ನೆನಪಿಲ್ಲ. ಪ್ರತಿವಾದಿಯು 1995 ರಿಂದ ಸದರಿ ಕ್ಷೇತ್ರದ ಕಬ್ಜಾದಲ್ಲಿ ಇದ್ದು

ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯ ಉತ್ತರಕ್ಕೆ ಮಂಗಲ ಬಿಸ್ವಾಸ್ ರವರ ಮನೆ ಇದೆ ಎಂದರೆ ಸಾಕ್ಷಿಯು ರಸ್ತೆ ಆದ ನಂತರ ಅವರ ಮನೆ ಇರುತ್ತದೆ ಎಂದು ನುಡಿದಿರುತ್ತಾರೆ. ನಾನು ದುಡ್ಡನ್ನು ಪಡೆದುಕೊಳ್ಳಲು ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ ಅಲ್ಲ. ದಾವಾ ಆಸ್ತಿಯ ದ-ಪೂ.ದ 25 X 40 ಕ್ಷೇತ್ರದಲ್ಲಿ ನಾವು 1995 ರಿಂದ ಕಬ್ಜಾದಲ್ಲಿ ಇಲ್ಲ ಎಂದರೆ ಸರಿ ಅಲ್ಲ. ಸಂಪೂರ್ಣ ದಾವಾ ಆಸ್ತಿಯ ಭಾವಚಿತ್ರಗಳನ್ನು ಹಾಗೂ ವಿಡಿಯೋವನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರಬಹುದು. ನಾನು ಯಾವುದೇ ಭಾವಚಿತ್ರವನ್ನು ಹಾಜರಪಡಿಸಿಲ್ಲ ಎಂದರೆ ಸರಿ ಅಲ್ಲ

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.